Sri K. PUTTASWAMY.—Sir, there is absolutely no difference of opinion that this slum requires immediate clearance ; but it is a human problem and it takes time.

Sri T. MADIAH GOWDA.—Since how long this slum area is in existance in Gadag-Betgeri ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಒಂದು ಚರಿತ್ರೆ ಇದ್ದ ಹಾಗೆ ಇದೆ. ಇದು ಬಹಳ ದಿನಗಳಿಂದ ಇದೆ. ಗದುಗಿನ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನು ಅದು.

Bheema Major Irrigation Project.

*Q.—569. Sri MAHANTHASWAMY (Shahpur).—

Will the Government be pleased to state :—

(*a*) the five—year plan in which the Bheema Major Irrigation Project has been included ;

(*b*) the estimated cost of the same ;

(*c*) when they would take up the same ?

A.—Sri S. NIJALINGAPPA (Chief Minister).—

(*a*) The Project is under investigation and has not been included in any five-year plan.

(*b*) and (*c*) Do not arise.

ಶ್ರೀ ಮಹಂತಸ್ವಾಮಿ.—(ಅ) ಭಾಗಕ್ಕೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಯಾವ ಹಂತದಲ್ಲಿದೆ ಎಂದು ಹೇಳುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆಯಲ್ಲಿ ಎಂದರೆ ಪ್ರಾಜೆಕ್ಟನ್ನು ಎಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ, ಎಷ್ಟು ಖರ್ಚಾಗುತ್ತದೆ, ಎಷ್ಟು ನೀರಾವರಿಯಾಗಬಹುದು, ಎಲ್ಲ ಕಾಲುವೆಗಳನ್ನು ತೆಗೆಯಬಹುದು, ಯಾವುದನ್ನು ಉಪಯೋಗಿಸಬೇಕು, ಮಣ್ಣನ್ನು ಉಪಯೋಗಿಸಬೇಕೇ, ಕಲ್ಲನ್ನು ಉಪಯೋಗಿಸಬೇಕೇ ಅಥವಾ ಸಿಮೆಂಟನ್ನು ಉಪಯೋಗಿಸಬೇಕೇ ಎಂಬುದನ್ನು ನೋಡಬೇಕು. ಇದೆಲ್ಲ ಪರಿಶೀಲನೆಯಲ್ಲದೆ.

ಶ್ರೀ ಎಸ್. ಎಂ. ಕೃಷ್ಣ.—ಇದಕ್ಕೆ ಎಸ್ಟಿಮೇಟ್ ಏನಾದರೂ ಮಾಡಿದ್ದಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಾರಂಭಿಕವಾಗಿ ಹತ್ತೂವರೆ ಕೋಟಿ ರೂಪಾಯಿ ಆಗಬಹುದು ಎಂದು ಅಂದಾಜಾಗಿದೆ. ಒಂದು ಲಕ್ಷ ಎಕರೆ ಸಾಗು ಆಗಬಹುದು.

ಶ್ರೀ ಮಹಂತಸ್ವಾಮಿ.—ಈ ಯೋಜನೆಗೆ ನಿವೇಶನವೇನಾದರೂ ಸರ್ಕಾರದವರು ನಿರ್ಧಾರ ಮಾಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಗುಲ್ಬರ್ಗದಲ್ಲಿ ತಂಗಡಿ ಎಂಬ ಒಂದು ಹಳ್ಳಿ ಇದೆ. ಅದರ ಹತ್ತಿರ ಅಥವಾ ಮೇಲ್ಗಡೆ ಹೋಗಬಹುದು ಎಂದು ನದ್ಯದ ಅಭಿಪ್ರಾಯ.

ಶ್ರೀ ಬಿ. ವಿ. ಮಾಗಾವಿ.—ಮಹಾರಾಷ್ಟ್ರದವರು ಈ ಭೀಮಾ ನದಿಗೆ ಈಗಾಗಲೇ ಒಂದು ಯೋಜನೆಯನ್ನು ಇಟ್ಟಿರುವುದರಿಂದ ನಮ್ಮ ರಾಜ್ಯಕ್ಕೆ ಇದರಿಂದ ಕಡಿಮೆ ನೀರು ಸರಬರಾಯಿ ಆಗಬಹುದಲ್ಲವೇ !

ಶ್ರೀ ಎಸ್. ನಿಜಲಿಂಗಪ್ಪ.—ಭೀಮಾ ನದಿಗೆ ಅವರು ಯೋಜನೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ವಿ. ಮಾಗಾವಿ.—ಅವರಲ್ಲಿ ಅಪ್ಪರ್ ಭೀಮಾ ಯೋಜನೆ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ.—ಉತ್ತರದಲ್ಲಿ, ಯಾವ ಪಂಚವಾರ್ಷಿಕ ಯೋಜನೆಯಲ್ಲೂ ಈ ಯೋಜನೆ ಸೇರಿಲ್ಲವೆಂದು ಹೇಳಿದೆ. ಅಂದ ಮೇಲೆ ಪಂಚವಾರ್ಷಿಕ ಯೋಜನೆಯಲ್ಲಿ ಎರ್ಲಾ ಇರಿಗೇಷನ್ ಪ್ರಾಜೆಕ್ಟುಗಳನ್ನು ಪ್ರಾರಂಭ ಮಾಡಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲವನ್ನೂ ಪ್ರಾರಂಭ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಅರ್ಧವಾಗಿವೆ. ಕೆಲವು ಇನ್ನೂ ಮುಗಿಯುತ್ತಾ ಇವೆ. ಕೆಲವಕ್ಕೆ ಅಸ್ತಿಭಾರ ಕೆಲಸವಾಗಿದೆ, ಮತ್ತೆ ಕೆಲವು ಪ್ರಾರಂಭವಾಗಬೇಕಾಗಿವೆ.

ಶ್ರೀ ಬಿ. ವಿ. ಮಾಗಾವಿ.—ಇದನ್ನು ನಾಲ್ಕನೆಯ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಯತ್ನ ಮಾಡಬಹುದು.

Vidyapeetas run by the State Adult Education Council.

*Q.—599. Sri SANJEEVANATH AIKALA (Suratkal).—

Will the Government be pleased to state.—

(*a*) the number of Vidyapeetas run by the State Adult Education Council in the State ;

(*b*) the places where they are located and the date of starting of these Vidyapeetas;

(*c*) what are the main aims, objects, programmes and functions of these Vidyapeetas ;

(*d*) which are the financing agencies of these Vidyapeetas and the extent of financial assistances received from such agencies in cash and kind, so far, since the starting of first Vidyapeetas ?

A.—Sri S. R. KANTHI (Minister for Education).—

(*a*) Eight.

(*b*)

Name of the Vidyapeetas	*Year of startings*
(1) Nanjangud	1947
(2) Hassan	1953
(3) Shivaragudda (Mandya District)	1957
(4) Kengeri (Bangalore District)	1957
(5) Tunga (Shimoga District)	1961
(6) Yenigadala (Kolar District)	1963
(7) Pampa (Bellary District)	1963
(8) Banthanal (Bijapur District)	1964

(*c*) The Vidyapeetas are residential institutions which impart education to village youths who lacked education when they were young. The main objective of Vidyapeetas scheme is to re-orient the life of the village youths by providing cultural and social education through training to enable them to become good citizens and attain the qualities of rural leadership. The training given in these institutions is mainly in agriculture and craft as bias. The syllabi of these institutions also include Cattle and Poultry Farming, History, Indian Constitution, Geography, Fine Arts, Health and Sanitation, etc.